ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 193/2020

ಪಿ. ಡಬ್ಲ್ಯು: 03
ಸಿ. ಡಬ್ಲ್ಯು: 03

ಸಾಕ್ಷಿದಾರರ ಹೆಸರು : ಗೋವಿಂದರಾಜು
ತಂದೆ/ಪತಿಯ ಹೆಸರು : ಕೃಷ್ಣೇಗೌಡ
ವಯಸ್ಸು : 53 ವರ್ಷ
ವೃತ್ತಿ : ವ್ಯವಸಾಯ
ವಾಸ : ಬೆಳಗೊಳ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 13.09.2022
ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ಮತ್ತು 2 ಗೊತ್ತು. ಆರೋಪಿಗಳು ಗೊತ್ತು. ಸುಮಾರು 2 ವರ್ಷಗಳ ಹಿಂದೆ ಆರೋಪಿಗಳು ಹಾಗೂ ಚಾಸಾ.1 ಮತ್ತು 2 ನಡುವೆ ಗಲಾಟೆ ನಡೆದಿರುತ್ತದೆ. ನಮ್ಮ ಗ್ರಾಮದ ಚಾಸಾ.1 ಮತ್ತು 2 ರವರ ಗದ್ದೆಯ ಹತ್ತಿರ ಗಲಾಟೆ ನಡೆದಿರುತ್ತದೆ. ಆಗ ಸಮಯ ಮಧ್ಯಾಹ್ನ 03.00-03.30 ಆಗಿತ್ತು. ಜಗಳ ಮೊಡವೆ ವಿಚಾರಕ್ಕೆ ನಡೆದಿರುತ್ತದೆ. ಗಲಾಟೆ ಸಮಯದಲ್ಲಿ ನವೀನ್ ಗುದ್ದಲಿಯಿಂದ ರಾಜುವಿನ ಬಲಗೈಗೆ ಹೊಡೆದಿರುತ್ತಾರೆ. ತಮ್ಮೇಗೌಡರು ದೊಣ್ಣೆಯಿಂದ ರವಿಗೆ ಬಲಗೈ ಹೆಬ್ಬೆರಳಿಗೆ ಹೊಡೆದಿರುತ್ತಾರೆ. ನಾನು ಮತ್ತು ಪುಟ್ಟಸ್ವಾಮಿ ಗಲಾಟೆಯನ್ನು ಬಿಡಿಸಿರುತ್ತೇವೆ. ನಂತರ ರಾಜು ಮತ್ತು ರವಿಯನ್ನು ಚಿಕಿತ್ಸೆಗಾಗಿ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ನಂತರ ಮೈಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ.

ರವಿ ಮತ್ತು ರಾಜು ರವರ ಮೇಲೆ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ರವಿ ಮತ್ತು ರಾಜು ರವರಿಗೆ ಹೊಡೆಯಲು ಉಪಯೋಗಿಸಿದ್ದ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಗುದ್ದಲಿ ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾಲು.1 ಮತ್ತು 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ಗಲಾಟೆ ನಡೆದ ದಿಃ 07.02.2020 ಎಂದರೆ ಸರಿ. ಗಲಾಟೆಯಲ್ಲಿ ನವೀನ್ ದೊಣ್ಣೆಯಿಂದ ರವಿಯ ಬಲಗೈ ಕಿರುಬೆರಳಿಗೆ ಹೊಡೆದರು ಎಂದರೆ ಸರಿ. ನವೀನ್ ರಾಜುವಿಗೆ ಗುದ್ದಲಿಯಿಂದ ಮೈ ಮೇಲೆ ಹೊಡೆದರು ಎಂದರೆ ಸರಿ. ನವೀನ್ ಮತ್ತು ಪವನ್ ರಾಜುವಿಗೆ ಕೈಯಿಂದ ಮೈ ಮೇಲೆ ಹೊಡೆದರು ಎಂದರೆ ಸರಿ. ನಾವು ಜಗಳ ಬಿಡಿಸಿದ ನಂತರ ಆರೋಪಿತರು ರವಿ ಮತ್ತು ರಾಜುವಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಕಾರಣಗಳು ಇಲ್ಲದ ಕಾರಣ ಅವರ ಪ್ರಾರ್ಥನೆಯನ್ನು ತಿರಸ್ಕರಿಸಲಾಗಿದೆ ಮತ್ತು ಆರೋಪಿ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.